

ತೆಗೆಯುವುದು ಸುಲಭ. ಆದರೆ ಇವು ಫೋಟೊ ಪಯಣದಲ್ಲಿ ಬೇಗ ಬೋರು ಹಿಡಿಸಿ ಬಿಡುತ್ತವೆ. ಅವೇ ಕೈಗೆ ಸಿಗದ, ಸತಾಯಿಸುವ, ಆಟವಾಡಿಸಿ ಗೋಳಾಡಿಸಿ ಪೋಜು ಕೊಡುವ ಹಕ್ಕಿಗಳ ಬಗ್ಗೆ ಇನ್ನಿಲ್ಲದ ಮಮತೆ ಮಮಕಾರ ನಮಗಿರುತ್ತದೆ. ಇಂತವು ಪುಕ್ಕಲ ಸ್ವಭಾವದ ಪಕ್ಷಿಗಳಾಗಿರುತ್ತವೆ. ಅಪಾಯವನ್ನು ದೂರದಿಂದಲೇ ಗ್ರಹಿಸಿ ಫುಸಕ್ಕನೆ ಹಾರಿ ಬಿಡುತ್ತವೆ.

ಯಾವ ರಿಸ್ಕ್ ಕೂಡ ತೆಗೆದುಕೊಳ್ಳಲು ಬಯಸುವುದಿಲ್ಲ. ಈ ಪ್ರಜಾತಿಯ ಪಕ್ಷಿಗಳ ಪಟ ಹಿಡಿಯುವುದು ತುಸು ನಾಜೂಕಿನ ಕೆಲಸ. ಚಂಬಲ್ ನದಿಯಲ್ಲಿ ನಾವು ಹುಡುಕುತ್ತಿದ್ದ ಇಂಡಿಯನ್ ಸಿಮ್ಮರ್ ಎಂಬ ಅಪರೂಪದ ಕೆಂಪು ಕೊಕ್ಕಿನ ಹಕ್ಕಿ ಕೂಡ ಇದೇ ಪುಕ್ಕಲ ಸ್ವಭಾವಕ್ಕೆ ಸೇರಿದ ಹಕ್ಕಿಯಾಗಿತ್ತು. ಇದರ ವೈಶಿಷ್ಟ್ಯ ಎಂದರೆ ಆಗಸದಿಂದ ಹಾರುತ್ತಾ ಹರಿಯುವ ನೀರಿನ ಮೇಲ್ಮೈಗೆ ಬಂದು ತನ್ನ ಕೊಕ್ಕನ್ನು ನೀರ ಮೇಲೆ ಚಿಮುಟದಂತೆ ಹಿಡಿಯುತ್ತದೆ. ನಂತರ ಅದೇ ವೇಗದಲ್ಲಿ ಹಾರುತ್ತಾ ನೀರನ್ನು ಸೀಳುತ್ತಾ ಮುಂದೆ ಸಾಗುತ್ತದೆ. ಆಗ ಇದರ ಕೊಕ್ಕಿಗೆ ನಿಲುಕುವ ಸಣ್ಣಮೀನು, ಏಡಿ, ಕಪ್ಪೆ ಮುಂತಾದ ಜಲಚರಗಳನ್ನು ಹಿಡಿದು ಮುಕ್ಕುತ್ತದೆ. ನೀರನ್ನು ಸೀಳಿಕೊಂಡು ಕ್ರೀಡಾಪಟುವಿನಂತೆ ಒಂದೇ ವೇಗದಲ್ಲಿ ಹಾರುವ ಇದರ ಈ ಭಂಗಿ ಜಗತ್ಪ್ರಸಿದ್ಧವಾದುದು. ಇದರ ಕೆಳ ಕೊಕ್ಕು ಈ ಕಾರಣಕ್ಕೋ ಏನೋ ಅಗತ್ಯಕ್ಕಿಂತ ಹೆಚ್ಚು ಉದ್ದವಿರುತ್ತದೆ. ಇಷ್ಟೊಂದು ಸೊಬಗಿನ ಈ ಹಕ್ಕಿ ಸಂತತಿ ಈಗ ಪರಿಸರ ನಾಶದ ಕಾರಣದಿಂದ ಅವನತಿಯೆಡೆಗೆ ತಿರುಗಿದೆ. ಇಡೀ ನದಿಯ ಜಾಡು ಅಲೆದಾಡಿದರೂ ಅವೇ ಎಂಟು ಪಕ್ಷಿಗಳು ಉಳಿದಿದ್ದವು. ಇವುಗಳ ಸಂಖ್ಯೆ ಕ್ಷೀಣಿಸಿ ಹೋಗಿದೆ.

ಈ ಹಕ್ಕಿ ನೋಡಲು ತಕ್ಷಣಕ್ಕೆ ರಿವರ್ ಟರ್ನ್ ತರಹ ಕಾಣುತ್ತದೆ. ಇದರಂತೆಯೇ ಕೆಂಪು ಬಣ್ಣದ ಕೊಕ್ಕು ಮತ್ತು ಕಾಲು ಹೊಂದಿರುವ ರಿವರ್ ಟರ್ನ್ ಇದರ ಸುತ್ತಮುತ್ತವೇ ಹಾರಾಡುತ್ತಿದ್ದವು. ಈ ಹಕ್ಕಿಯು ಆಗಸದಲ್ಲಿ ಹಾರಿದಾಗ ಇದರ ನಿಜವಾದ ಚೆಂದ ಎದ್ದು ಕಾಣುತ್ತದೆ. ವಿಶೇಷ ವಿನ್ಯಾಸದ ಕಪ್ಪು ಮತ್ತು ಬಿಳಿ ದೇಹದ ಜೊತೆಗೆ ಕೆಂಪು ಮೂತಿ ಹೊಂದಿರುವ ಇದು ಹೆಚ್ಚಾಗಿ ಗುಂಪಲ್ಲಿ ವಾಸಿಸುತ್ತದೆ. ಅಭದ್ರತೆ ಹೆಚ್ಚು ಕಾಡುವ ಪ್ರಾಣಿ ಪಕ್ಷಿಗಳು ಎಂದೂ ಒಂಟಿಯಾಗಿರುವುದಿಲ್ಲ. ಗುಂಪಿನಲ್ಲಿದ್ದರೆ ದಾಳಿಯನ್ನು ಒಗ್ಗಟ್ಟಾಗಿ ಎದುರಿಸಬಹುದೆಂಬ ಲೆಕ್ಕಾಚಾರ ಇವಕ್ಕಿರಬಹುದು.

ನದಿ ಪಾತ್ರದಲ್ಲಿ ಬಾಯಿ ತೆರೆದು ಮಲಗಿದ ಘಾರಿಯಾಲ್ ಮೊಸಳೆಗಳು ವಿಶೇಷ ಎನಿಸಿದವು. ಉದ್ದ